# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1209(1446) |
| ಸದಸ್ಯರ ಹೆಸರು | ಶ್ರೀ ಮಂಜುನಾಥ್ ಭಂಡಾರಿ<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 16.03.2026 |
| ಉತ್ತರಿಸುವವರು | ಅರಣ್ಯ ಜೀವಿಶಾಸ್ತ್ರ, ಮತ್ತು ಪರಿಸರ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ವನ್ಯಜೀವಿ-ಮಾನವ ಸಂಘರ್ಷ ಪ್ರಕರಣಗಳು ಹೆಚ್ಚುತ್ತಿರುವುದು ಸರ್ಕಾರದ ಗಮನದಲ್ಲಿದೆಯೇ; ಇಂತಹ ಪ್ರಕರಣಗಳನ್ನು ಸಮರ್ಪಕವಾಗಿ ನಿಭಾಯಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು: | ಹೌದು.<br><br>ಇಲಾಖೆಯು ಮಾನವ- ವನ್ಯಜೀವಿ ಸಂಘರ್ಷವನ್ನು ಯಶಸ್ವಿಯಾಗಿ ನಿಭಾಯಿಸುತ್ತಿದ್ದು, ಈ ನಿಟ್ಟಿನಲ್ಲಿ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.<br><br>**ಭೌತಿಕ ಅಡೆತಡೆಗಳ ನಿರ್ಮಾಣ:**<br>ಕಾಡಾನೆಗಳು ಅರಣ್ಯ ಪ್ರದೇಶದಿಂದ ಹೊರಗೆ ಬಾರದಂತೆ ತಡೆಗಟ್ಟಲು ಅರಣ್ಯದಂಚಿನಲ್ಲಿ ಸೌರಶಕ್ತಿ ಬೇಲಿ, ಆನೆತಡೆ ಕಂದಕ ನಿರ್ಮಾಣ ಮಾಡಲಾಗಿದ್ದು ಮತ್ತು ರೈಲ್ವೆ ಹಳಿಗಳನ್ನು ಉಪಯೋಗಿಸಿ ಬ್ಯಾರಿಕೇಡ್ ನಿರ್ಮಿಸುವ ಕಾಮಗಾರಿಯನ್ನು ಕೈಗೊಳ್ಳಗುತ್ತಿದೆ.<br><br>ರಾಜ್ಯದಲ್ಲಿ ಮಾನವ-ಆನೆ ಸಂಘರ್ಷ ಹೆಚ್ಚಾಗಿರುವ ಪ್ರದೇಶಗಳಲ್ಲಿ ಕಾಡಾನೆಗಳು ಅರಣ್ಯ ಪ್ರದೇಶದಿಂದ ಹೊರಗೆ ಬಾರದಂತೆ ನಿಯಂತ್ರಿಸಲು ಉಪಯೋಗಿಸಿದ ರೈಲ್ವೆ ಹಳಿಗಳನ್ನು ಉಪಯೋಗಿಸಿಕೊಂಡು ರೈಲ್ವೆ ಬ್ಯಾರಿಕೇಡ್ ಕಾಮಗಾರಿಯನ್ನು ಕೈಗೊಳ್ಳಲಾಗುತ್ತಿದ್ದು, **ಒಟ್ಟು.428 ಕಿ.ಮೀ** ರೈಲ್ವೆ ಬ್ಯಾರಿಕೇಡ್ ನಿರ್ಮಿಸಲಾಗಿದೆ.<br><br>**ಆನೆ ಕಾರ್ಯಪಡೆಗಳ ಸ್ಥಾಪನೆ:**<br><br>ದಿನಾಂಕ:21.11.2022ರ ಆದೇಶದಲ್ಲಿ ಹಾಸನ, ಚಿಕ್ಕಮಗಳೂರು, ಮೈಸೂರು ಮತ್ತು ಕೊಡಗು ಜಿಲ್ಲೆಗಳಲ್ಲಿ, ದಿನಾಂಕ:01.02.2023ರ ಆದೇಶದಲ್ಲಿ ಚಾಮರಾಜನಗರ ಜಿಲ್ಲೆ, ದಿನಾಂಕ: 30.06.2023ರ ಆದೇಶದಲ್ಲಿ ರಾಮನಗರ ಹಾಗೂ ಬೆಂಗಳೂರು ಜಿಲ್ಲೆಗಳಲ್ಲಿ, ದಿನಾಂಕ 18.05.2024ರ ಆದೇಶದಲ್ಲಿ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದಲ್ಲಿ, ದಿನಾಂಕ: 02-03-2026ರ ಆದೇಶದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮತ್ತು ದಿನಾಂಕ: 02-03-2026ರ ಆದೇಶದಲ್ಲಿ ಶೃಂಗೇರಿ-ಕೊಪ್ಪ ಆನೆ ಕಾರ್ಯಪಡೆಯನ್ನು ಸ್ಥಾಪಿಸಿ ಕಾಡಾನೆ ಹಾವಳಿಯನ್ನು ತಡೆಗಟ್ಟಲು ಅಧಿಕಾರಿ / ಸಿಬ್ಬಂದಿಗಳನ್ನೊಳಗೊಂಡ **10 ಆನೆ ಕಾರ್ಯಪಡೆ (Elephant Task Force)** ನ್ನು ರಚಿಸಲಾಗಿರುತ್ತದೆ. |

Rchand

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| | | ರಾಜ್ಯದಲ್ಲಿ ಮಾನವ- ಆನೆ ಸಂಘರ್ಷ ಉಂಟಾಗುವ ಸಂದರ್ಭಗಳಲ್ಲಿ ಕಾಡಾನೆಗಳನ್ನು ಸೆರೆಹಿಡಿಯುವ ಕಾರ್ಯಾಚರಣೆಗಾಗಿ ದುಬಾರೆ, ಮತ್ತಿಗೋಡು, ಬಳ್ಳೆ, ಹಾರಂಗಿ, ಭೀಮನಕಟ್ಟೆ ಮತ್ತು ರಾಮಾಪುರ ಆನೆ ಶಿಬಿರಗಳಲ್ಲಿನ ಪಳಗಿದ ಆನೆಗಳನ್ನು ಬಳಸಿಕೊಂಡು ನುರಿತ ಪಶು ವೈದ್ಯಾಧಿಕಾರಿ, ಮಾವುತ ಹಾಗೂ ಇತರೆ ಸಿಬ್ಬಂದಿಗಳೊಳಗೊಂಡ ಮೂರು ತಂಡಗಳನ್ನು ರಚಿಸಲಾಗಿರುತ್ತದೆ. ಸದರಿ ತಂಡವು ರಾಜ್ಯದ ಯಾವುದೇ ಭಾಗದಿಂದ ಕಾಡಾನೆ ಸೆರೆಹಿಡಿಯುವ ಕಾರ್ಯಾಚರಣೆಗೆ ಬೇಡಿಕೆ ಬಂದಾಗ ಈ ತಂಡಗಳಲ್ಲಿ ಒಂದು ತಂಡವನ್ನು ಕಾರ್ಯಾಚರಣೆಗೆ ನಿಯೋಜಿಸಲಾಗುತ್ತಿದೆ.<br><br>**ಚಿರತೆ ಕಾರ್ಯಪಡೆಗಳ ಸ್ಥಾಪನೆ:**<br>ಸರ್ಕಾರವು ದಿನಾಂಕ: 31.01.2023ರ ಆದೇಶದಲ್ಲಿ ಮೈಸೂರು ವೃತ್ತದ ಮೈಸೂರು / ನಂಜನಗೂಡು / ಹೆಚ್.ಡಿ.ಕೋಟೆ / ಸರಗೂರು / ಟಿ.ನರಸೀಪುರ / ಮಂಡ್ಯ / ಪಾಂಡವಪುರ / ನಾಗಮಂಗಲ ವ್ಯಾಪ್ತಿಯಲ್ಲಿ ಚಿರತೆ ಹಾವಳಿ ಹೆಚ್ಚಾಗಿರುವ ಪ್ರದೇಶಗಳಲ್ಲಿ ಚಿರತೆ ಹಾವಳಿ ನಿಭಾಯಿಸುವ ನಿಟ್ಟಿನಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿ, ವನ್ಯಜೀವಿ ವಿಭಾಗ, ಮೈಸೂರು ಇವರ ನೇತೃತ್ವದಲ್ಲಿ **ಚಿರತೆ ಕಾರ್ಯಪಡೆ (Leopard Task Force) ರಚಿಸಲಾಗಿದೆ**. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯಪಡೆ ಮುಖ್ಯಸ್ಥರು) ರವರ ಅಧಿಕೃತ ಜ್ಞಾಪನಾ ಪತ್ರ ದಿನಾಂಕ: 24.11.2023ರಲ್ಲಿ ಬೆಂಗಳೂರು ಜಿಲ್ಲೆಯ ಕಗ್ಗಲೀಪುರ / ಆನೆಕಲ್ಲು / ಯಲಹಂಕ / ಹೊಸಕೋಟೆ / ಕೆ.ಆರ್.ಪುರಂ ವಲಯಗಳ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಚಿರತೆ ಹಾವಳಿ ನಿಭಾಯಿಸುವ ನಿಟ್ಟಿನಲ್ಲಿ ಚಿರತೆ ಕಾರ್ಯಪಡೆಯನ್ನು ರಚಿಸಲಾಗಿದೆ.<br><br>**ಜಲ ಸಂಪನ್ಮೂಲ ಅಭಿವೃದ್ಧಿ:**<br>ವನ್ಯಪ್ರಾಣಿಗಳಿಗಾಗಿ ಅರಣ್ಯ ಪ್ರದೇಶಗಳ ಒಳಗೆ ನೀರಿನ ಲಭ್ಯತೆ ಹೆಚ್ಚಿಸಲು ರಕ್ಷಿತಾರಣ್ಯಗಳಲ್ಲಿ ಕೆರೆಗಳ ನಿರ್ಮಾಣ ಹಾಗೂ ಪುನಶ್ಚೇತನ ಗೊಳಿಸಿ ವನ್ಯಪ್ರಾಣಿಗಳ ಆವಾಸ ಸ್ಥಾನವನ್ನು ಅಭಿವೃದ್ಧಿ ಗೊಳಿಸಲಾಗುತ್ತಿದೆ. ಇದರಿಂದ ಕಾಡಾನೆ ಹಾಗೂ ಇತರೆ ವನ್ಯಪ್ರಾಣಿಗಳು ಕಾಡಿನಿಂದ ಹೊರಗೆ ಬಾರದಂತೆ ತಡೆಯಲಾಗುತ್ತಿದೆ.<br><br>**ಆವಾಸ ಸ್ಥಾನ ಅಭಿವೃದ್ಧಿ:**<br>ಅರಣ್ಯ ಪ್ರದೇಶಗಳಲ್ಲಿ ಹುಲ್ಲುಗಾವಲು ಸಂರಕ್ಷಣೆ ಹಾಗೂ ಅಭಿವೃದ್ಧಿಗೊಳಿಸಲು ಹೆಚ್ಚಿನ ಅರಣ್ಯ ಪ್ರದೇಶಗಳಲ್ಲಿ ದಟ್ಟವಾಗಿ ಬೆಳೆದ ಲಂಟಾನ ಮತ್ತು ಯುಪಟೋರಿಯಂ ಕಳೆಗಳಿಂದಾಗಿ ಹುಲ್ಲಿನ ಬೆಳವಣಿಗೆಗೆ ತೀವ್ರ ಅಡಚಣೆಯಾಗಿ ಅರಣ್ಯದಲ್ಲಿ ಹುಲ್ಲಿನ ಲಭ್ಯತೆ ಗಣನೀಯವಾಗಿ ಕಡಿಮೆಯಾಗಿರುವುದರಿಂದ ಹುಲ್ಲು ಬೆಳೆಯುವ ಪ್ರದೇಶಗಳಲ್ಲಿ ಬೆಳೆದಿರುವ ಲಂಟಾನ ಮತ್ತು ಯುಪಟೋರಿಯಂ ಕಳೆಗಳನ್ನು ಕಿತ್ತು ಸ್ವಚ್ಛಗೊಳಿಸಿ ಅರಣ್ಯಕ್ಕೆ ಪೂರಕವಾದ ಹುಲ್ಲು ಬೆಳೆಯಲು ಅನುವು ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| | | ಆನೆಗಳು ಮತ್ತು ಇತರೆ ವನ್ಯಪ್ರಾಣಿಗಳು ಒಂದು ಅರಣ್ಯ ಪ್ರದೇಶದಿಂದ ಇನ್ನೊಂದು ಅರಣ್ಯ ಪ್ರದೇಶಕ್ಕೆ ಅಡೆತಡೆ ಇರದಂತೆ ಸಂಚರಿಸಲು ಅನುಕೂಲವಾಗುವಂತೆ ವನ್ಯಜೀವಿ ಕಾರಿಡಾರ್ (Wildlife Corridor) ಅನುಷ್ಠಾನಗೊಳಿಸಬೇಕಾಗಿರುತ್ತದೆ. ಇದಕ್ಕಾಗಿ ತಯಾರಿಸಿರುವ ವನ್ಯಜೀವಿ ಕಾರಿಡಾರ್ (Wildlife Corridor) ಪಾಲಿಸಿಯು ಪರಿಶೀಲನೆಯಲ್ಲಿರುತ್ತದೆ.<br><br>**ತ್ವರಿತ ಕಾರ್ಯಾಚರಣೆ:**<br>ಆನೆ ಕಾರ್ಯಪಡೆ (ETF) ಮತ್ತು ಚಿರತೆ ಕಾರ್ಯಪಡೆ (LTF) ಗಳಿಗೆ 24X7 ಕಾರ್ಯ ನಿರ್ವಹಿಸಲು ನಿಯಂತ್ರಣ ಕೊಠಡಿಯನ್ನು ಸ್ಥಾಪಿಸಿದ್ದು, ನಿಯಂತ್ರಣ ಕೊಠಡಿಗೆ ಬರುವ ಕರೆಗಳಿಗೆ ಸ್ಪಂದಿಸಿ ಕೂಡಲೇ ಕ್ರಮವಹಿಸಲಾಗುತ್ತಿದೆ.<br>ಸಾರ್ವಜನಿಕರಿಗೆ ಉಪಟಳ ನೀಡುತ್ತಿರುವ ಪುಂಡಾನೆಗಳನ್ನು ಗುರುತಿಸಿ, ಸೆರೆಹಿಡಿದು ಆಗ್ಗಿಂದಾಗ್ಗೆ ಆನೆ ಶಿಬಿರಗಳಿಗೆ ಸ್ಥಳಾಂತರಿಸಲಾಗುತ್ತಿದೆ.<br>ಚಿರತೆ / ಹುಲಿ ಹಾವಳಿ ಹೆಚ್ಚಾಗಿರುವ ಸೂಕ್ಷ್ಮ ಪ್ರದೇಶಗಳಲ್ಲಿ ಬೋನುಗಳನ್ನು ಇರಿಸಿ ಸೆರೆ ಹಿಡಿದು, ಸೂಕ್ತ ಆವಾಸಸ್ಥಾನಕ್ಕೆ ಸ್ಥಳಾಂತರಿಸಲು ಕ್ರಮವಹಿಸಲಾಗುತ್ತಿದೆ.<br>ವನ್ಯಪ್ರಾಣಿಗಳ ಹಾವಳಿ ಹೆಚ್ಚಾಗಿರುವ ಪ್ರದೇಶಗಳಲ್ಲಿ ಈಗಾಗಲೇ ರಚಿಸಿರುವ RRT, ADC, ಮತ್ತು ETF ಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ತಂಡಗಳನ್ನು ಒಟ್ಟುಗೂಡಿಸಿ ಮಾನವ-ವನ್ಯಜೀವಿ ಸಂಘರ್ಷ ಉಪ ತಂಡಗಳಾಗಿ ರಚಿಸಿ ಆಯ್ದ ಸ್ಥಳಗಳಲ್ಲಿ ನಿಯೋಜಿಸಲಾಗಿದೆ.<br>ನಿಸ್ತಂತು ಜಾಲದ ಮೂಲಕ ಮಾಹಿತಿ ಸಂವಹನ ಮಾಡಲಾಗುತ್ತಿದೆ.<br>ಕಾಡಾನೆಗಳ ಮಾಹಿತಿಯನ್ನು ಸಂಗ್ರಹಿಸಲು 24 ಗಂಟೆ ಕಾರ್ಯನಿರ್ವಹಿಸುವ ಮಾಹಿತಿ ಕೇಂದ್ರ ಸ್ಥಾಪಿಸಲಾಗಿದೆ.<br>ಕಾಡಾನೆ ಗುಂಪಿನಲ್ಲಿದ್ದ ವಯಸ್ಕ ಹೆಣ್ಣಾನೆಯನ್ನು ಗುರುತಿಸಿ ಅದಕ್ಕೆ ರೇಡಿಯೋ ಕಾಲರ್ ಅಳವಡಿಸಿ ಆನೆಗಳ ಚಲನ-ವಲನಗಳ ಬಗ್ಗೆ ಎಸ್.ಎಂ.ಎಸ್. ಹಾಗೂ ಮೊಬೈಲ್ ಸಂದೇಶದ ಮೂಲಕ ಜನರಿಗೆ ಮಾಹಿತಿಯನ್ನು ನೀಡಿ ಮಾನವ ಪ್ರಾಣಹಾನಿ ಹಾಗೂ ಮಾನವ ಗಾಯ ತಪ್ಪಿಸಲು ಕ್ರಮ ವಹಿಸಲಾಗುತ್ತಿದೆ.<br><br>**ಸಹಾಯ ಧನ:**<br>ರೈತರಿಗೆ ಸಬ್ಸಿಡಿ ದರದಲ್ಲಿ ಸೋಲಾರ್ ಬೇಲಿ ನಿರ್ಮಾಣ ಮಾಡಲು ಉತ್ತೇಜನ ನೀಡಲಾಗುತ್ತಿದೆ ಹಾಗೂ ಅರಣ್ಯದ ಅಂಚಿನಲ್ಲಿ ಬರುವ ಖಾಸಗಿ ಜಮೀನುಗಳ ಸುತ್ತಾ ಸರಕಾರದ ವತಿಯಿಂದ ದೊರಕುವ ಶೇ. 50 ಸಬ್ಸಿಡಿಯನ್ನು ಬಳಸಿಕೊಂಡು ಸೌರಶಕ್ತಿ ಬೇಲಿಯನ್ನು ನಿರ್ಮಿಸಲಾಗುತ್ತಿದೆ. |

Relash

| ಕ್ರ. ಸಂ | ಪ್ರಶ್ನೆ | ಉತ್ತರ |
| --- | --- | --- |
| ಆ) | ಕಳೆದ ಮೂರು ವರ್ಷಗಳಲ್ಲಿ ರಾಜ್ಯದ ವಿವಿಧ ಪ್ರದೇಶಗಳಲ್ಲಿ ಆನೆ, ಚಿರತೆ, ಮಂಗ, ನವಿಲು ಹಾಗೂ ಇತರ ಕಾಡುಪ್ರಾಣಿಗಳಿಂದ ಕೃಷಿ, ತೋಟಗಾರಿಕೆ ಬೆಳೆ ಹಾನಿ,ಸಾಕುಪ್ರಾಣಿ, ಜಾನುವಾರು ಹಾಗೂ ಮಾನವರ ಮೇಲೆ ದಾಳಿಮಾಡಿದ ಪ್ರಕರಣಗಳ ಸಂಖ್ಯೆ ಎಷ್ಟು; ಜಿಲ್ಲಾವಾರು ಹಾಗೂ ವನ್ಯಜೀವಿ ಪ್ರಭೇದವಾರು ವಿವರ ನೀಡುವುದು; | ಕಳೆದ ಮೂರು ವರ್ಷಗಳಲ್ಲಿ ರಾಜ್ಯದ ವಿವಿಧ ಪ್ರದೇಶಗಳಲ್ಲಿ ಆನೆ, ಚಿರತೆ, ಮಂಗ, ನವಿಲು ಹಾಗೂ ಇತರ ಕಾಡುಪ್ರಾಣಿಗಳಿಂದ ಉಂಟಾದ ಕೃಷಿ, ತೋಟಗಾರಿಕೆ ಬೆಳೆ ಹಾನಿ, ಸಾಕುಪ್ರಾಣಿ, ಜಾನುವಾರು ಹಾಗೂ ಮಾನವರ ಮೇಲೆ ದಾಳಿಮಾಡಿದ ಪ್ರಕರಣಗಳ ಸಂಖ್ಯೆಯ ವಿಭಾಗವಾರು ವಿವರವನ್ನು **ಅನುಬಂಧ-1 ರಿಂದ 06** ರಲ್ಲಿ ಒದಗಿಸಲಾಗಿದೆ. |
| ಇ) | ಇಂತಹ ಪ್ರಕರಣಗಳನ್ನು ಆಯಾ ಪ್ರದೇಶದ ಭೌಗೋಳಿಕ ಹಾಗೂ ಪರಿಸರ ವೈಶಿಷ್ಟ್ಯತೆಗಳಿಗೆ ಅನುಗುಣವಾಗಿ ನಿಭಾಯಿಸಲು ಅರಣ್ಯ ಇಲಾಖೆಯ ಬಳಿ ಅಗತ್ಯ ಮಾನವ ಸಂಪನ್ಮೂಲ, ತಾಂತ್ರಿಕ ಉಪಕರಣಗಳು ಹಾಗೂ ಮೂಲ ಸೌಕರ್ಯಗಳು ಲಭ್ಯವಿದೆಯೇ; ಇಲ್ಲದಿದ್ದಲ್ಲಿ ಅವುಗಳನ್ನು ಒದಗಿಸಲು ಕೈಗೊಂಡ ಕ್ರಮಗಳೇನು; | ಮಾನವ-ಪ್ರಾಣಿ ಸಂಘರ್ಷವನ್ನು ಭೌಗೋಳಿಕ ಹಾಗೂ ಪರಿಸರ ವೈಶಿಷ್ಟ್ಯತೆಗಳಿಗೆ ಅನುಗುಣವಾಗಿ ನಿಭಾಯಿಸಲು ಮುಂಚೂಣಿ ಸಿಬ್ಬಂದಿಗಳಿಗೆ ಇಲಾಖಾ ವತಿಯಿಂದ ನೀಡಿರುವ ಕ್ರಮಗಳ ವಿವರ ಈ ಕೆಳಕಂಡಂತಿದೆ.<br><br>• ಮಾನವ ವನ್ಯಜೀವಿ ಸಂಘರ್ಷ ತಡೆಯಲು ಅಧಿಕಾರಿಗಳು ಮತ್ತು ಸಿಬ್ಬಂದಿಗಳಿಗೆ ಇಲಾಖಾ ವತಿಯಿಂದ ವಾಹನ, ರಕ್ಷಣಾ ಕವಚ, ಬಲೆಗಳು, ಪಟಾಕಿಗಳು, ಬಂದೂಕುಗಳು, ಟಾರ್ಚ್ ಇತ್ಯಾದಿ ಸೌಲಭ್ಯಗಳನ್ನು ನೀಡಲಾಗಿರುತ್ತದೆ.<br>• ವನ್ಯಪ್ರಾಣಿಗಳ ಹಾವಳಿ ಹೆಚ್ಚಾಗಿರುವ ಪ್ರದೇಶಗಳಲ್ಲಿ ಈಗಾಗಲೇ ರಚಿಸಿರುವ RRT, ADC, LTF ಮತ್ತು ETF ಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ತಂಡಗಳನ್ನು ಒಟ್ಟುಗೂಡಿಸಿ ಮಾನವ-ವನ್ಯಜೀವಿ ಸಂಘರ್ಷ ಉಪ ತಂಡಗಳಾಗಿ ರಚಿಸಿ ಆಯ್ದ ಸ್ಥಳಗಳಲ್ಲಿ ನಿಯೋಜಿಸಲಾಗಿದೆ ಹಾಗೂ ಸಿಬ್ಬಂದಿಗಳಿಗೆ ಆಗಿಂದಾಗ್ಗೆ ತರಬೇತಿಯನ್ನು ನೀಡಲಾಗುತ್ತಿದೆ.<br>• ನಿಸ್ತಂತು ಜಾಲದ ಮೂಲಕ ಮಾಹಿತಿ ಸಂವಹನ ಮಾಡಲಾಗುತ್ತಿದೆ.<br>• ಆನೆ ಕಾರ್ಯಪಡೆ (ETF) ಮತ್ತು ಚಿರತೆ ಕಾರ್ಯಪಡೆ (LTF) ಗಳಿಗೆ 24X7 ಕಾರ್ಯ ನಿರ್ವಹಿಸಲು ನಿಯಂತ್ರಣ ಕೊಠಡಿಯನ್ನು ಸ್ಥಾಪಿಸಿದ್ದು, ನಿಯಂತ್ರಣ ಕೊಠಡಿಗೆ ಬರುವ ಕರೆಗಳಿಗೆ ಸ್ಪಂದಿಸಿ ಕೂಡಲೇ ಕ್ರಮವಹಿಸಲಾಗುತ್ತಿದೆ.<br>• ಡ್ರೋನ್‌ಗಳ ಮುಖಾಂತರ ವನ್ಯಪ್ರಾಣಿಗಳ ಚಲನ-ವಲನಗಳನ್ನು ಗಮನಿಸಲಾಗುತ್ತಿದೆ.<br>• ಅರಣ್ಯದಂಚಿನ ಆಯ್ದ ಪ್ರದೇಶಗಳಲ್ಲಿ "**AI**" Based Camera ಗಳನ್ನು ಅಳವಡಿಸಲಾಗಿದ್ದು, ವನ್ಯಪ್ರಾಣಿಗಳ ಚಲನ-ವಲನಗಳನ್ನು ಗಮನಿಸಲಾಗುತ್ತಿದೆ.<br>• ಸಂಘರ್ಷಕ್ಕೆ ಕಾರಣವಾಗುವ ವನ್ಯಪ್ರಾಣಿಗಳನ್ನು ಸೆರೆ ಹಿಡಿಯಲು ಬೋನುಗಳನ್ನು ಖರೀದಿಸಲಾಗಿರುತ್ತದೆ.<br>• ಅಗತ್ಯ ಸಂದರ್ಭಗಳಲ್ಲಿ ಆನೆ ಸಂಘರ್ಷ ನಿರ್ವಹಣೆಗೆ ರಾಜ್ಯದ ವಿವಿಧ ಆನೆ ಶಿಬಿರದಿಂದ ಆನೆಗಳ ಸಹಾಯವನ್ನು ಪಡೆಯಲಾಗುತ್ತಿರುತ್ತದೆ. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಈ) | ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ದಾಖಲಾಗಿರುವ ವನ್ಯಜೀವಿ-ಮಾನವ ಸಂಘರ್ಷ ಪ್ರಕರಣಗಳೆಷ್ಟು; ಎಷ್ಟು ವನ್ಯಜೀವಿಗಳನ್ನು ಜನವಸತಿ ಪ್ರದೇಶಗಳಿಂದ ಸುರಕ್ಷಿತ ಅರಣ್ಯ ಪ್ರದೇಶಗಳಿಗೆ ಸ್ಥಳಾಂತರಿಸಲಾಗಿದೆ; | ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ದಾಖಲಾಗಿರುವ ವನ್ಯಜೀವಿ-ಮಾನವ ಸಂಘರ್ಷ ಪ್ರಕರಣಗಳಗಳ ವಿವರ ಹಾಗೂ ವನ್ಯಜೀವಿಗಳನ್ನು ಜನವಸತಿ ಪ್ರದೇಶಗಳಿಂದ ಸುರಕ್ಷಿತ ಅರಣ್ಯ ಪ್ರದೇಶಗಳಿಗೆ ಸ್ಥಳಾಂತರಿಸಲಾದ ವಿವರವನ್ನು **ಅನುಬಂಧ-07ರಲ್ಲಿ** ಒದಗಿಸಲಾಗಿದೆ. |
| ಉ) | ಹಾನಿಗೊಳಗಾದ ರೈತರು ಹಾಗೂ ನಾಗರೀಕರಿಗೆ ಪರಿಹಾರ ಧನ ನೀಡುವ ಸಹಿತ ವನ್ಯಜೀವಿ-ಮಾನವ ಸಂಘರ್ಷ ವನ್ನು ವ್ಯವಸ್ಥಿತವಾಗಿ ನಿಭಾಯಿಸಲು ಸರ್ಕಾರ ರೂಪಿಸಿರುವ ಸಮಗ್ರ ಕಾರ್ಯಯೋಜನೆಯೇನು:<br>ಮುನ್ನೆಚ್ಚರಿಕಾ ಕ್ರಮಗಳು, ಜನಜಾಗೃತಿ ಕಾರ್ಯಕ್ರಮಗಳು ಹಾಗೂ ತ್ವರಿತ ಪ್ರತಿಕ್ರಿಯಾ ತಂಡಗಳ (Rapid Response Teams) ಸ್ಥಾಪನೆ ಕುರಿತು ಸರ್ಕಾರದ ನಿಲುವೇನು? | ವನ್ಯಪ್ರಾಣಿಗಳಿಂದ ಹಾನಿಗೊಳಗಾದ ರೈತರು ಹಾಗೂ ನಾಗರಿಕರಿಗೆ ನಿಯಮಾನುಸಾರ ದಯಾತ್ಮಕ ಧನ ಮಂಜೂರಾತಿ ಪ್ರಕ್ರಿಯೆಯನ್ನು **ಇ-ಪರಿಹಾರ** ತಂತ್ರಾಂಶದ ಮೂಲಕ ನಿರ್ವಹಿಸಲು ಕ್ರಮಕೈಗೊಳ್ಳಲಾಗುತ್ತಿದೆ.<br><br>ಈ ಆನ್‌ಲೈನ್ ವ್ಯವಸ್ಥೆಯಲ್ಲಿ ಬೆಳೆ, ಆಸ್ತಿ ಮತ್ತು ಜೀವಹಾನಿ ಪ್ರಕರಣಗಳಿಗೆ ದಯಾತ್ಮಕ ಧನ ಮಂಜೂರಾತಿ ಪ್ರಕ್ರಿಯೆಯನ್ನು ಸುಗಮಗೊಳಿಸುತ್ತದೆ ಹಾಗೂ ಆಡಳಿತ ಪ್ರಕ್ರಿಯೆಯಲ್ಲಿ ಆಗುವ ವಿಳಂಬವನ್ನು ತಪ್ಪಿಸಲು ಅನುಕೂಲವಾಗುತ್ತದೆ. ಅಲ್ಲದೇ, ಸದರಿ ಅಪ್ಲಿಕೇಶನ್ ನಲ್ಲಿ ದಾಖಲಿಸಲಾದ Back End Data ನಿಂದ ಮಾನವ-ವನ್ಯಪ್ರಾಣಿ ಸಂಘರ್ಷದ ಕಾರಣಗಳು, ಹೆಚ್ಚಿನ ಸಂಘರ್ಷದ ಪ್ರದೇಶಗಳು ಮತ್ತು ಸಂಘರ್ಷ-ಉಂಟುಮಾಡುವ ಪ್ರಾಣಿಗಳನ್ನು ವಿಶ್ಲೇಷಿಸಲು ಅನುಕೂಲವಾಗುತ್ತದೆ.<br><br>ಮಾನವ-ವನ್ಯಜೀವಿ ಸಂಘರ್ಷವನ್ನು ವ್ಯವಸ್ಥಿತವಾಗಿ ನಿಭಾಯಿಸಲು ಈ ಕೆಳಕಂಡ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.<br><br>ಮಾನವ- ಆನೆ ಸಂಘರ್ಷ ಹೆಚ್ಚಿರುವ 10 ಜಿಲ್ಲೆಗಳಲ್ಲಿ **"ಆನೆ ಎಲ್ಲಿ"** ಎಂಬ ತಂತ್ರಜ್ಞಾನ ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ. ಈ ವ್ಯವಸ್ಥೆಯು ಸಾರ್ವಜನಿಕ ದೂರುಗಳು, ಗಸ್ತು ತಿರುಗುವಿಕೆ ಮುಂತಾದ ವಿವಿಧ ರೀತಿಯ ಮಾಹಿತಿಗಳ ಮೂಲಕ ಆನೆಗಳ ಚಲನವಲನವನ್ನು ಮೇಲ್ವಿಚಾರಣೆ ಮಾಡುತ್ತದೆ. ಈ ಮಾಹಿತಿಯು ಆನೆಗಳ ಚಲನವಲನದ ಮಾದರಿಯನ್ನು ಪತ್ತೆಹಚ್ಚಲು ಮತ್ತು ಸಾರ್ವಜನಿಕರಿಗೆ ಮುಂಚಿನ ಎಚ್ಚರಿಕೆ ಸಂದೇಶಗಳನ್ನು ಕಳುಹಿಸಲು ಸಹಾಯ ಮಾಡುತ್ತಿದೆ. ಅಲ್ಲದೇ, ವಿವಿಧ ವಿಭಾಗಗಳಿಂದ ಲಭ್ಯವಾಗುವ ಮಾಹಿತಿಯನ್ನು ರಿಯಲ್-ಟೈಮ್‌ನಲ್ಲಿ ಸಂಗ್ರಹಿಸಿ, ವಿಶ್ಲೇಷಿಸಿ, ಸೂಕ್ತ ನಿರ್ಧಾರಗಳನ್ನು ಕೈಗೊಳ್ಳಲು ಹಾಗೂ ಕ್ಷೇತ್ರ ಮಟ್ಟದ ಚಟುವಟಿಕೆಗಳನ್ನು ಸಮನ್ವಯಗೊಳಿಸಲು, ರಾಜ್ಯ ಕೇಂದ್ರ ಸ್ಥಾನದಲ್ಲಿ **ಸಂಯೋಜಿತ ಕಮಾಂಡ್ ಅಂಡ್ ಕಂಟ್ರೋಲ್ ಸೆಂಟರ್ (ICCC)** ಹಾಗೂ 12 ವಿಭಾಗಗಳಲ್ಲಿ **ವಿಭಾಗೀಯ ಕಮಾಂಡ್ ಅಂಡ್ ಕಂಟ್ರೋಲ್ ಸೆಂಟರ್(DCCC)** ಗಳನ್ನು ಸ್ಥಾಪಿಸಲಾಗುತ್ತಿದೆ. ನಿಸ್ತಂತು ಜಾಲದ ಮೂಲಕ ಮಾಹಿತಿ ಸಂವಹನ ಮಾಡಲಾಗುತ್ತಿದೆ.<br>ರೇಡಿಯೋ ಕಾಲರ್ ಅಳವಡಿಸಿರುವ ಕಾಡಾನೆ, ಹುಲಿ, ಚಿರತೆಗಳ ಚಲನ-ವಲನಗಳನ್ನು ದಿನನಿತ್ಯ ಗಮನಿಸಲು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| | | ಇಲಾಖಾವತಿಯಿಂದ '**ಹೆಜ್ಜೆ**' ಎಂಬ ಡ್ಯಾಶ್ ಬೋರ್ಡ್ ನ್ನು ತಯಾರಿಸಲಾಗಿದೆ.<br>ಕಾಡಂಚಿನ ಗ್ರಾಮಗಳಲ್ಲಿ ವನ್ಯಪ್ರಾಣಿಗಳು ಬಂದಂತಹ ಸಂದರ್ಭಗಳಲ್ಲಿ ಸಾರ್ವಜನಿಕರಿಗೆ ಎಚ್ಚರಿಕೆ/ ಮಾಹಿತಿ ನೀಡಲು **Advance alert system** ಅನ್ನು ತಯಾರಿಸಲಾಗಿದೆ. ಇದರಿಂದಾಗಿ ಸಾರ್ವಜನಿಕರಿಗೆ ನೇರವಾಗಿ ಸಂದೇಶಗಳನ್ನು ಕಳುಹಿಸಲಾಗುತ್ತಿದೆ.<br>ಕಾಡಾನೆ ಇರುವ ಪ್ರದೇಶಗಳಲ್ಲಿ ಸಾರ್ವಜನಿಕರಿಗೆ ಎಚ್ಚರಿಕೆ/ ಮಾಹಿತಿ ನೀಡಲು ಡಿಜಿಟಲ್ ಬೋರ್ಡ್‌ಗಳನ್ನು ಅಳವಡಿಸಲಾಗಿದೆ.<br>ಅರಣ್ಯದಂಚಿನ ಆಯ್ದ ಪ್ರದೇಶಗಳಲ್ಲಿ "**AI**" Based Camera ಗಳನ್ನು ಅಳವಡಿಸಲಾಗಿದ್ದು, ವನ್ಯಪ್ರಾಣಿಗಳ ಚಲನ-ವಲನಗಳನ್ನು ಗಮನಿಸಲಾಗುತ್ತಿದೆ.<br>**ಡ್ರೋನ್‌ಗಳ** ಮುಖಾಂತರ ವನ್ಯಪ್ರಾಣಿಗಳ ಚಲನ-ವಲನಗಳನ್ನು ಗಮನಿಸಲಾಗುತ್ತಿದೆ.<br><br>**ಅರಿವು ಮೂಡಿಸಲು:**<br><br>ಕಾಡಾನೆಗಳ ಹಾವಳಿ ಹೆಚ್ಚಾಗಿರುವ ಪ್ರದೇಶದಲ್ಲಿ ಜನ ಸಂಪರ್ಕ ಸಭೆಯನ್ನು ಕರೆದು ಜನರಲ್ಲಿ ಅರಿವು ಮೂಡಿಸಲಾಗುತ್ತಿದೆ.<br><br>ಶಾಲಾಮಕ್ಕಳಿಗೆ ಅರಿವು ಮೂಡಿಸಲು "**ಚಿಣ್ಣರ ವನದರ್ಶನ**" ಕಾರ್ಯಕ್ರಮ ಕೈಗೊಳ್ಳಲಾಗುತ್ತಿದೆ.<br>ಪ್ರಸ್ತುತ ಮಾನವ-ವನ್ಯಜೀವಿ ಸಂಘರ್ಷ ಹೆಚ್ಚಾಗಿ ಕಂಡುಬರುವ ಜಿಲ್ಲೆಗಳಾದ ಕೊಡಗು, ಹಾಸನ, ಮೈಸೂರು, ಬೆಂಗಳೂರು ದಕ್ಷಿಣ(ರಾಮನಗರ) ಜಿಲ್ಲೆಗಳಲ್ಲಿ ವನ್ಯಪ್ರಾಣಿಗಳ ಹಾವಳಿಯನ್ನು ತಡೆಗಟ್ಟಲು ಕ್ಷಿಪ್ರ ಕಾರ್ಯಪಡೆ (Rapid Response Team) ಗಳು ಕಾರ್ಯನಿರ್ವಹಿಸುತ್ತಿದ್ದು, ಮಾನವ-ವನ್ಯಜೀವಿ ಸಂಘರ್ಷ ಕಂಡುಬರುವ ಉಳಿದ ಜಿಲ್ಲೆಗಳಲ್ಲಿಯೂ ಅವಶ್ಯಕತೆಗನುಗುಣವಾಗಿ ಇಲಾಖಾ ಸಿಬ್ಬಂದಿಗಳೊಂದಿಗೆ ಆನೆ ಕಾರ್ಯಪಡೆ/ ವನ್ಯಪ್ರಾಣಿ ಹಿಮ್ಮೆಟ್ಟಿಸುವ ತಂಡಗಳು/ ಚಿರತೆ ಕಾರ್ಯಪಡೆ ಹಾಗೂ ಕಳ್ಳಬೇಟೆ ತಡೆ ಶಿಬಿರಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರಿಂದ ವನ್ಯಜೀವಿ ಹಾವಳಿ ನಿಯಂತ್ರಣ ಕಾರ್ಯ ಕೈಗೊಳ್ಳಲಾಗುತ್ತಿದೆ. |

**ಅಪಜೀ 81 ಎಫ್‌ಡಬ್ಲ್ಯೂಎಲ್ 2026**

**(ಈಶ್ವರ ಬಿ. ಖಂಡ್ರೆ)**
**ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು**

# ಅನುಬಂಧ-01

**2022-23 ರಿಂದ 2025-26 ರವರೆಗಿನ ವನ್ಯಪ್ರಾಣಿಗಳ ದಾಳಿಯಿಂದ ಉಂಟಾದ ಮಾನವ ಸಾವಿನ ಪ್ರಕರಣಗಳ ಜಿಲ್ಲಾವಾರು ವಿವರ**

| ಕ್ರ. ಸಂ | ಜಿಲ್ಲೆ | 2022-23 | 2023-24 | 2024-25 | 2025-26 (Till Date) | ಒಟ್ಟು |
|---|---|---|---|---|---|---|
| 1 | ಕೊಡಗು | 7 | 12 | 7 | 11 | **37** |
| 2 | ಚಾಮರಾಜನಗರ | 12 | 18 | 5 | 10 | **45** |
| 3 | ಹಾಸನ | 4 | 5 | 7 | 4 | **20** |
| 4 | ಮೈಸೂರು | 9 | 4 | 5 | 8 | **26** |
| 5 | ರಾಮನಗರ/ ಬೆಂಗಳೂರು ದಕ್ಷಿಣ | 3 | 7 | 3 | 3 | **16** |
| 6 | ಚಿಕ್ಕಮಗಳೂರು | 4 | 5 | 6 | 5 | **20** |
| 7 | ಉತ್ತರ ಕನ್ನಡ | 4 | 2 | - | - | **6** |
| 8 | ಕೋಲಾರ | 1 | - | 4 | - | **5** |
| 9 | ಬೆಂಗಳೂರು ನಗರ | 3 | 2 | 1 | - | **6** |
| 10 | ದಕ್ಷಿಣ ಕನ್ನಡ | 3 | 1 | - | 4 | **8** |
| 11 | ಶಿವಮೊಗ್ಗ | 1 | 1 | 2 | 2 | **6** |
| 12 | ಉಡುಪಿ | 1 | 1 | | | **2** |
| 13 | ಕಲಬುರಗಿ | 2 | 1 | - | - | **3** |
| 14 | ದಾವಣಗೆರೆ | 1 | 2 | - | - | **3** |
| 15 | ಮಂಡ್ಯ | - | 1 | 1 | - | **2** |
| 16 | ಬೀದರ್ | - | 1 | - | - | **1** |
| 17 | ವಿಜಯಪುರ | 2 | - | - | 1 | **3** |
| 18 | ಬೆಂಗಳೂರು ಗ್ರಾಮೀಣ | - | - | 1 | - | **1** |
| 19 | ಚಿಕ್ಕಬಳ್ಳಾಪುರ | - | 1 | - | - | **1** |
| 20 | ತುಮಕೂರು | 1 | - | - | 1 | **2** |
| 21 | ರಾಯಚೂರು | - | - | 1 | - | **1** |
| 22 | ಯಾದಗಿರಿ | - | 1 | - | - | **1** |
| 23 | ಚಿತ್ರದುರ್ಗ | - | - | 1 | - | **1** |
| 24 | ಬೆಳಗಾವಿ | - | - | 1 | - | **1** |
| 25 | ಕೊಪ್ಪಳ | - | - | 1 | - | **1** |
| 26 | ವಿಜಯನಗರ | - | - | - | 1 | **1** |
| 27 | ಹಾವೇರಿ | - | - | - | 1 | **1** |
| **ಒಟ್ಟು** | | **58** | **65** | **46** | **51** | **220** |

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ(ವನ್ಯಜೀವಿ)
ಮತ್ತು ಮುಖ್ಯ ವನ್ಯಜೀವಿ ಪರಿಪಾಲಕರು
ಕರ್ನಾಟಕ, ಬೆಂಗಳೂರು.

## ಅನುಬಂಧ-02

**ಕಳೆದ ಮೂರು ವರ್ಷಗಳಲ್ಲಿ ವನ್ಯಪ್ರಾಣಿಗಳ ದಾಳಿಯಿಂದ ಉಂಟಾದ ಮನವ ಪ್ರಾಣಹಾನಿಯ ವಿವರ**

| ಕ್ರ ಸಂ | ವನ್ಯಪ್ರಾಣಿ | 2022-23 | 2023-24 | 2024-25 | 2025-26 | Total |
|---|---|---|---|---|---|---|
| 1 | ಆನೆ | 33 | 48 | 36 | 34 | **151** |
| 2 | ಹುಲಿ | 5 | 5 | 2 | 7 | **19** |
| 3 | ಚಿರತೆ | 6 | 3 | 1 | 5 | **15** |
| 4 | ಮೊಸಳೆ | 4 | 1 | 2 | 1 | **8** |
| 5 | ಕಾಡು ಹಂದಿ | 4 | 4 | 1 | - | **9** |
| 6 | ಕರಡಿ | 2 | 2 | 3 | 2 | **9** |
| 7 | ತೋಳ | 1 | - | - | - | **1** |
| 8 | ಕಾಡು ಕೋಣ | 3 | - | 1 | 2 | **6** |
| 9 | ಕಡವೆ | - | - | - | - | **0** |
| 10 | ಕೋತಿ | - | 1 | - | - | **1** |
| 11 | ಕಡಜ | - | 1 | - | - | **1** |
| **Total** | | **58** | **65** | **46** | **51** | **220** |

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ(ವನ್ಯಜೀವಿ)
ಮತ್ತು ಮುಖ್ಯ ವನ್ಯಜೀವಿ ಪರಿಪಾಲಕರು
ಕರ್ನಾಟಕ, ಬೆಂಗಳೂರು.

| ಅನುಬಂಧ-03 | | | | | |
|---|---|---|---|---|---|
| 2025-26 ನೇ ಸಾಲಿನಲ್ಲಿ ಆನೆ, ಚಿರತೆ, ಮಂಗ, ನವಿಲು ಹಾಗೂ ಇತರೆ ವನ್ಯಪ್ರಾಣಿಗಳಿಂದ ಹಾನಿಗೊಳಗಾದ ಪ್ರಕರಣಗಳಿಗೆ ಪರಿಹಾರ ಪಾವತಿಸಿರುವ ವಿವರಗಳು (ಜನವರಿ-2026ರ ಅಂತ್ಯಕ್ಕೆ) | | | | | |
| ಕ್ರ ಸಂ | ವಿಭಾಗ | ಬೆಳೆ ಪರಿಹಾರ | ಮಾನವ ಗಾಯ | ಆಸ್ತಿ ನಷ್ಟ | ಒಟ್ಟು |
| ಬೆಂಗಳೂರು ವೃತ್ತ | | | | | |
| 1 | ಬೆಂಗಳೂರು ನಗರ | 4 | - | 1 | **5** |
| 2 | ಬೆಂಗಳೂರು ಗ್ರಾಮಾಂತರ | - | 2 | - | **2** |
| 3 | ರಾಮನಗರ | 3,144 | 12 | 329 | **3,485** |
| 4 | ಕೋಲಾರ | 50 | 3 | - | **53** |
| 5 | ಚಿಕ್ಕಬಳ್ಳಾಪುರ | 174 | 3 | - | **177** |
| 6 | ಬನ್ನೇರುಘಟ್ಟ | 1,516 | 4 | 171 | **1,691** |
| | **ಒಟ್ಟು** | **4,888** | **24** | **501** | **5,413** |
| ಬೆಳಗಾಂ ವೃತ್ತ | | | | | |
| 1 | ಬೆಳಗಾಂ | 1,554 | 13 | 10 | **1,577** |
| 2 | ಗೋಕಾಕ್ | 10 | 1 | - | **11** |
| 3 | ಬಾಗಲಕೋಟೆ | 170 | 5 | - | **175** |
| 4 | ವಿಜಯಪುರ | 4 | 6 | - | **10** |
| | **ಒಟ್ಟು** | **1,738** | **25** | **10** | **1,773** |
| ಬಳ್ಳಾರಿ ವೃತ್ತ | | | | | |
| 1 | ಬಳ್ಳಾರಿ | 64 | 1 | - | **65** |
| 2 | ವಿಜಯನಗರ | 306 | 6 | - | **312** |
| 3 | ಚಿತ್ರದುರ್ಗ | 59 | 4 | - | **63** |
| 4 | ದಾವಣಗೆರೆ | 95 | 2 | - | **97** |
| 5 | ಕೊಪ್ಪಳ | 131 | 4 | - | **135** |
| | **ಒಟ್ಟು** | **655** | **17** | - | **672** |
| ಚಾಮರಾಜನಗರ ವೃತ್ತ | | | | | |
| 1 | ಬಿ.ಆರ್.ಟಿ | 342 | 11 | 27 | **380** |
| 2 | ಎಂ.ಎಂ ಹಿಲ್ಸ್ | 1,447 | 7 | 169 | **1,623** |
| 3 | ಕಾವೇರಿ ವ.ಜೀ | 881 | 5 | 141 | **1,027** |
| | **ಒಟ್ಟು** | **2,670** | **23** | **337** | **3,030** |
| ಚಿಕ್ಕಮಗಳೂರು ವೃತ್ತ | | | | | |
| 1 | ಚಿಕ್ಕಮಗಳೂರು | 1,083 | 8 | 39 | **1,130** |
| 2 | ಕೊಪ್ಪ | 390 | 16 | 6 | **412** |
| 3 | ಭದ್ರಾ | 393 | 4 | 27 | **424** |
| | **ಒಟ್ಟು** | **1,866** | **28** | **72** | **1,966** |
| ಧಾರವಾಡ ವೃತ್ತ | | | | | |
| 1 | ಧಾರವಾಡ | 853 | 1 | - | **854** |
| 2 | ಗದಗ್ | 398 | - | - | **398** |
| 3 | ಹಾವೇರಿ | 858 | 2 | - | **860** |
| | **ಒಟ್ಟು** | **2,109** | **3** | - | **2,112** |
| ಗುಲ್ಬರ್ಗ ವೃತ್ತ | | | | | |
| 1 | ಬೀದರ್ | 677 | 22 | - | **699** |
| 2 | ಗುಲ್ಬರ್ಗ | 266 | 20 | - | **286** |
| 3 | ಯಾದಗಿರಿ | - | 4 | - | **4** |
| 4 | ರಾಯಚೂರು | 1 | 3 | - | **4** |
| | **ಒಟ್ಟು** | **944** | **49** | - | **993** |

| | | | | | |
|---|---|---|---|---|---|
| **ಕೆನರಾ ವೃತ್ತ** | | | | | |
| 1 | ದಾಂಡೇಲಿ | 391 | 2 | - | **393** |
| 2 | ಹಳಿಯಾಲ | 425 | 4 | - | **429** |
| 3 | ಹೊನ್ನಾವರ | 209 | 10 | - | **219** |
| 4 | ಕಾರವಾರ | 32 | 2 | - | **34** |
| 5 | ಶಿರಸಿ | 467 | 1 | - | **468** |
| 6 | ಯಲ್ಲಾಪುರ | 186 | 6 | 2 | **194** |
| **ಒಟ್ಟು** | | **1,710** | **25** | **2** | **1,737** |
| **ಹಾಸನ ವೃತ್ತ** | | | | | |
| 1 | ಹಾಸನ | 3,936 | 10 | 231 | **4,177** |
| 2 | ತುಮಕೂರು | 290 | 18 | - | **308** |
| **ಒಟ್ಟು** | | **4,226** | **28** | **231** | **4,485** |
| **ಕೊಡಗು ವೃತ್ತ** | | | | | |
| 1 | ನಾಗರಹೊಳೆ | 1,780 | 14 | 72 | **1,866** |
| 2 | ಮಡಿಕೇರಿ | 1,452 | 2 | 34 | **1,488** |
| 3 | ವಿರಾಜಪೇಟೆ | 2,234 | 3 | 129 | **2,366** |
| 4 | ಮಡಿಕೇರಿ ವ.ಜೀ | 866 | 1 | 68 | **935** |
| **ಒಟ್ಟು** | | **6,332** | **20** | **303** | **6,655** |
| **ಮಂಗಳೂರು ವೃತ್ತ** | | | | | |
| 1 | ಮಂಗಳೂರು | 475 | 6 | 11 | **492** |
| 2 | ಕುಂದಾಪುರ | 171 | 9 | 2 | **182** |
| 3 | ಕುದುರೇಮುಖ | 129 | 1 | - | **130** |
| **ಒಟ್ಟು** | | **775** | **16** | **13** | **804** |
| **ಮೈಸೂರು ವೃತ್ತ** | | | | | |
| 1 | ಬಂಡೀಪುರ | 4,101 | 32 | 423 | **4,556** |
| 2 | ಮೈಸೂರು | 737 | 2 | 62 | **801** |
| 3 | ಹುಣಸೂರು | 27 | - | - | **27** |
| 4 | ಮಂಡ್ಯ | 62 | 19 | - | **81** |
| 5 | ಮೈಸೂರು ವ.ಜೀ | 2 | - | - | **2** |
| **ಒಟ್ಟು** | | **4,929** | **53** | **485** | **5,467** |
| **ಶಿವಮೊಗ್ಗ ವೃತ್ತ** | | | | | |
| 1 | ಭದ್ರಾವತಿ | 527 | 2 | 4 | **533** |
| 2 | ಸಾಗರ | 141 | 1 | 1 | **143** |
| 3 | ಶಿವಮೊಗ್ಗ | 168 | - | - | **168** |
| 4 | ಶಿವಮೊಗ್ಗ ವ.ಜೀ | 88 | - | 4 | **92** |
| **ಒಟ್ಟು** | | **924** | **3** | **9** | **936** |
| **ಒಟ್ಟಾರೆ** | | **33,766** | **314** | **1,963** | **36,043** |

13/3/18

**ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ(ವನ್ಯಜೀವಿ)**
**ಮತ್ತು ಮುಖ್ಯ ವನ್ಯಜೀವಿ ಪರಿಪಾಲಕರು**
**ಕರ್ನಾಟಕ, ಬೆಂಗಳೂರು.**

| ಅನುಬಂಧ-04 | | | | |
|---|---|---|---|---|
| **2024-25 ನೇ ಸಾಲಿನಲ್ಲಿ ಆನೆ, ಚಿರತೆ, ಮಂಗ, ನವಿಲು ಹಾಗೂ ಇತರೆ ವನ್ಯಪ್ರಾಣಿಗಳಿಂದ ಹಾನಿಗೊಳಗಾದ ಪ್ರಕರಣಗಳಿಗೆ ಪರಿಹಾರ ಪಾವತಿಸಿರುವ ವಿವರಗಳು** | | | | |
| **ಕ್ರ ಸಂ** | **ವಿಭಾಗ** | **ಬೆಳೆ ಪರಿಹಾರ** | **ಗಾಯ** | **ಆಸ್ತಿ ನಷ್ಟ** |
| | | **ಸಂಖ್ಯೆ** | **ಸಂಖ್ಯೆ** | **ಸಂಖ್ಯೆ** |
| **ಬೆಂಗಳೂರು ವೃತ್ತ** | | | | |
| 1 | ಬೆಂಗಳೂರು ನಗರ | 12 | - | 3 |
| 2 | ಬೆಂಗಳೂರು ಗ್ರಾಮಾಂತರ | 5 | 1 | - |
| 3 | ರಾಮನಗರ | 5,913 | 24 | 761 |
| 4 | ಕೋಲಾರ | 55 | - | - |
| 5 | ಚಿಕ್ಕಬಳ್ಳಾಪುರ | 233 | - | - |
| 6 | ಬನ್ನೇರುಘಟ್ಟ | 1,931 | 2 | 346 |
| | **ಒಟ್ಟು** | **8,149** | **27** | **1,110** |
| **ಬೆಳಗಾಂ ವೃತ್ತ** | | | | |
| 1 | ಬೆಳಗಾಂ | 317 | - | 2 |
| 2 | ಗೋಕಾಕ್ | - | 2 | - |
| 3 | ಬಾಗಲಕೋಟೆ | 179 | - | - |
| 4 | ವಿಜಯಪುರ | 2 | 1 | - |
| | **ಒಟ್ಟು** | **498** | **3** | **2** |
| **ಬಳ್ಳಾರಿ ವೃತ್ತ** | | | | |
| 1 | ಬಳ್ಳಾರಿ | 27 | 2 | - |
| 2 | ವಿಜಯನಗರ | 146 | 5 | - |
| 3 | ಚಿತ್ರದುರ್ಗ | 93 | 5 | - |
| 4 | ದಾವಣಗೆರೆ | 199 | - | - |
| 5 | ಕೊಪ್ಪಳ | 249 | 16 | - |
| | **ಒಟ್ಟು** | **714** | **28** | **-** |
| **ಚಾಮರಾಜನಗರ ವೃತ್ತ** | | | | |
| 1 | ಬಿ.ಆರ್.ಟಿ | 386 | 5 | 36 |
| 2 | ಎಂ.ಎಂ ಹಿಲ್ಸ್ | 700 | 6 | 90 |
| 3 | ಕಾವೇರಿ ವ.ಜೀ | 795 | 6 | 117 |
| | **ಒಟ್ಟು** | **1,881** | **17** | **243** |
| **ಚಿಕ್ಕಮಗಳೂರು ವೃತ್ತ** | | | | |
| 1 | ಚಿಕ್ಕಮಗಳೂರು | 1,922 | 4 | 103 |
| 2 | ಕೊಪ್ಪ | 367 | 11 | 8 |
| 3 | ಭದ್ರಾ | 253 | - | 12 |
| | **ಒಟ್ಟು** | **2,542** | **15** | **123** |
| **ಧಾರವಾಡ ವೃತ್ತ** | | | | |
| 1 | ಧಾರವಾಡ | 409 | - | 2 |
| 2 | ಗದಗ್ | 359 | 4 | - |
| 3 | ಹಾವೇರಿ | 212 | - | - |
| | **ಒಟ್ಟು** | **980** | **4** | **2** |
| **ಗುಲ್ಬರ್ಗ ವೃತ್ತ** | | | | |
| 1 | ಬೀದರ್ | 390 | 8 | |

| | | | | |
|---|---|---|---|---|
| 2 | ಗುಲ್ಬರ್ಗ | 41 | 33 | - |
| 3 | ಯಾದಗಿರಿ | 2 | 11 | - |
| 4 | ರಾಯಚೂರು | 11 | 2 | - |
| | **ಒಟ್ಟು** | **444** | **54** | **-** |
| **ಕೆನರಾ ವೃತ್ತ** | | | | |
| 1 | ದಾಂಡೇಲಿ | 273 | 1 | - |
| 2 | ಹಳಿಯಾಲ | 411 | - | - |
| 3 | ಹೊನ್ನಾವರ | 145 | 7 | - |
| 4 | ಕಾರವಾರ | 68 | 1 | - |
| 5 | ಶಿರಸಿ | 452 | 1 | - |
| 6 | ಯಲ್ಲಾಪುರ | 195 | 2 | 1 |
| | **ಒಟ್ಟು** | **1,544** | **12** | **1** |
| **ಹಾಸನ ವೃತ್ತ** | | | | |
| 1 | ಹಾಸನ | 3,015 | 6 | 142 |
| 2 | ತುಮಕೂರು | 273 | 20 | - |
| | **ಒಟ್ಟು** | **3,288** | **26** | **142** |
| **ಕೊಡಗು ವೃತ್ತ** | | | | |
| 1 | ನಾಗರಹೊಳೆ | 1,286 | 10 | 160 |
| 2 | ಮಡಿಕೇರಿ | 1,520 | 4 | 8 |
| 3 | ವಿರಾಜಪೇಟೆ | 1,791 | 12 | 111 |
| 4 | ಮಡಿಕೇರಿ ವ.ಜೀ | 943 | 1 | 90 |
| | **ಒಟ್ಟು** | **5,540** | **27** | **369** |
| **ಮಂಗಳೂರು ವೃತ್ತ** | | | | |
| 1 | ಮಂಗಳೂರು | 429 | 9 | 7 |
| 2 | ಕುಂದಾಪುರ | 235 | 7 | - |
| 3 | ಕುದುರೇಮುಖ | 105 | 3 | - |
| | **ಒಟ್ಟು** | **769** | **19** | **7** |
| **ಮೈಸೂರು ವೃತ್ತ** | | | | |
| 1 | ಬಂಡೀಪುರ | 3,130 | 19 | 411 |
| 2 | ಮೈಸೂರು | 636 | 10 | 26 |
| 3 | ಹುಣಸೂರು | 15 | 1 | 1 |
| 4 | ಮಂಡ್ಯ | 147 | 5 | 6 |
| 5 | ಮೈಸೂರು ವ.ಜೀ | 2 | - | - |
| | **ಒಟ್ಟು** | **3,930** | **35** | **444** |
| **ಶಿವಮೊಗ್ಗ ವೃತ್ತ** | | | | |
| 1 | ಭದ್ರಾವತಿ | 672 | 7 | 32 |
| 2 | ಸಾಗರ | 208 | 1 | 2 |
| 3 | ಶಿವಮೊಗ್ಗ | 120 | 3 | - |
| 4 | ಶಿವಮೊಗ್ಗ ವ.ಜೀ | 57 | - | - |
| | **ಒಟ್ಟು** | **1,057** | **11** | **34** |
| | **ಒಟ್ಟಾರೆ** | **31,336** | **278** | **2,477** |

13/3/13

**ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ(ವನ್ಯಜೀವಿ)**
**ಮತ್ತು ಮುಖ್ಯ ವನ್ಯಜೀವಿ ಪರಿಪಾಲಕರು**
**ಕರ್ನಾಟಕ, ಬೆಂಗಳೂರು.**

## ಅನುಬಂಧ-05

### 2023-24 ನೇ ಸಾಲಿನಲ್ಲಿ ಆನೆ, ಚಿರತೆ, ಮಂಗ, ನವಿಲು ಹಾಗೂ ಇತರೆ ವನ್ಯಪ್ರಾಣಿಗಳಿಂದ ಹಾನಿಗೊಳಗಾದ ಪ್ರಕರಣಗಳಿಗೆ ಪರಿಹಾರ ಪಾವತಿಸಿರುವ ವಿವರಗಳು

| ಕ್ರ ಸಂ | ವಿಭಾಗ | ಬೆಳೆ ಪರಿಹಾರ | ಗಾಯ | ಆಸ್ತಿ ನಷ್ಟ |
|---|---|---|---|---|
| | | ಸಂಖ್ಯೆ | ಸಂಖ್ಯೆ | ಸಂಖ್ಯೆ |
| **ಬೆಂಗಳೂರು ವೃತ್ತ** | | | | |
| 1 | ಬೆಂಗಳೂರು ನಗರ | 37 | 2 | 7 |
| 2 | ಬೆಂಗಳೂರು ಗ್ರಾಮಾಂತರ | 6 | - | - |
| 3 | ರಾಮನಗರ | 5,144 | 21 | 449 |
| 4 | ಕೋಲಾರ | 120 | 1 | - |
| 5 | ಚಿಕ್ಕಬಳ್ಳಾಪುರ | 123 | 1 | - |
| 6 | ಬನ್ನೇರುಘಟ್ಟ | 1,377 | 3 | 194 |
| | **ಒಟ್ಟು** | **6,807** | **28** | **650** |
| **ಬೆಳಗಾಂ ವೃತ್ತ** | | | | |
| 1 | ಬೆಳಗಾಂ | 1,267 | 2 | - |
| 2 | ಗೋಕಾಕ್ | 23 | 1 | - |
| 3 | ಬಾಗಲಕೋಟೆ | 159 | 3 | - |
| 4 | ವಿಜಯಪುರ | 12 | - | - |
| | **ಒಟ್ಟು** | **1,461** | **6** | - |
| **ಬಳ್ಳಾರಿ ವೃತ್ತ** | | | | |
| 1 | ಬಳ್ಳಾರಿ | 95 | 2 | - |
| 2 | ವಿಜಯನಗರ | 533 | 12 | - |
| 3 | ಚಿತ್ರದುರ್ಗ | 171 | 4 | - |
| 4 | ದಾವಣಗೆರೆ | 238 | - | - |
| 5 | ಕೊಪ್ಪಳ | 258 | 13 | - |
| | **ಒಟ್ಟು** | **1,295** | **31** | - |
| **ಚಾಮರಾಜನಗರ ವೃತ್ತ** | | | | |
| 1 | ಬಿ.ಆರ್.ಟಿ | 651 | 8 | 160 |
| 2 | ಎಂ.ಎಂ ಹಿಲ್ಸ್ | 906 | 17 | 117 |
| 3 | ಕಾವೇರಿ ವ.ಜೀ | 1,221 | 7 | 199 |
| | **ಒಟ್ಟು** | **2,778** | **32** | **476** |
| **ಚಿಕ್ಕಮಗಳೂರು ವೃತ್ತ** | | | | |
| 1 | ಚಿಕ್ಕಮಗಳೂರು | 1,514 | 8 | 25 |
| 2 | ಕೊಪ್ಪ | 292 | 16 | 13 |
| 3 | ಭದ್ರಾ | 147 | - | 7 |
| | **ಒಟ್ಟು** | **1,953** | **24** | **45** |
| **ಧಾರವಾಡ ವೃತ್ತ** | | | | |
| 1 | ಧಾರವಾಡ | 535 | 2 | 4 |
| 2 | ಗದಗ್ | 354 | 4 | - |
| 3 | ಹಾವೇರಿ | 556 | 4 | - |
| | **ಒಟ್ಟು** | **1,445** | **10** | **4** |
| **ಗುಲ್ಬರ್ಗ ವೃತ್ತ** | | | | |
| 1 | ಬೀದರ್ | 836 | 17 | - |
| 2 | ಗುಲ್ಬರ್ಗ | 211 | 41 | - |
| 3 | ಯಾದಗಿರಿ | 10 | 10 | - |

| | | | | |
|---|---|---|---|---|
| 4 | ರಾಯಚೂರು | - | - | - |
| | **ಒಟ್ಟು** | **1,057** | **68** | **-** |
| **ಕೆನರಾ ವೃತ್ತ** | | | | |
| 1 | ದಾಂಡೇಲಿ | 89 | 1 | - |
| 2 | ಹಳಿಯಾಲ | 408 | 2 | |
| 3 | ಹೊನ್ನಾವರ | 76 | 6 | - |
| 4 | ಕಾರವಾರ | 37 | 2 | - |
| 5 | ಶಿರಸಿ | 368 | 3 | - |
| 6 | ಯಲ್ಲಾಪುರ | 116 | 1 | |
| | **ಒಟ್ಟು** | **1,094** | **15** | **-** |
| **ಹಾಸನ ವೃತ್ತ** | | | | |
| 1 | ಹಾಸನ | 3,641 | 8 | 128 |
| 2 | ತುಮಕೂರು | 368 | 30 | - |
| | **ಒಟ್ಟು** | **4,009** | **38** | **128** |
| **ಕೊಡಗು ವೃತ್ತ** | | | | |
| 1 | ನಾಗರಹೊಳೆ | 2,212 | 11 | 135 |
| 2 | ಮಡಿಕೇರಿ | 2,412 | 4 | 62 |
| 3 | ವಿರಾಜಪೇಟೆ | 3,977 | 9 | 66 |
| 4 | ಮಡಿಕೇರಿ ವ.ಜೀ | 1,593 | 1 | 125 |
| | **ಒಟ್ಟು** | **10,194** | **25** | **388** |
| **ಮಂಗಳೂರು ವೃತ್ತ** | | | | |
| 1 | ಮಂಗಳೂರು | 282 | 10 | 1 |
| 2 | ಕುಂದಾಪುರ | 300 | 4 | - |
| 3 | ಕುದುರೇಮುಖ | 144 | 1 | - |
| | **ಒಟ್ಟು** | **726** | **15** | **1** |
| **ಮೈಸೂರು ವೃತ್ತ** | | | | |
| 1 | ಬಂಡೀಪುರ | 3,012 | 27 | 410 |
| 2 | ಮೈಸೂರು | 672 | 10 | 29 |
| 3 | ಹುಣಸೂರು | 35 | 3 | - |
| 4 | ಮಂಡ್ಯ | 568 | 2 | - |
| 5 | ಮೈಸೂರು ವ.ಜೀ | - | - | - |
| | **ಒಟ್ಟು** | **4,287** | **42** | **439** |
| **ಶಿವಮೊಗ್ಗ ವೃತ್ತ** | | | | |
| 1 | ಭದ್ರಾವತಿ | 299 | 10 | 4 |
| 2 | ಸಾಗರ | 118 | 1 | - |
| 3 | ಶಿವಮೊಗ್ಗ | 310 | 2 | 1 |
| 4 | ಶಿವಮೊಗ್ಗ ವ.ಜೀ | 45 | - | 2 |
| | **ಒಟ್ಟು** | **772** | **13** | **7** |
| | **ಒಟ್ಟಾರೆ** | **37,878** | **347** | **2,138** |

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ(ವನ್ಯಜೀವಿ)
ಮತ್ತು ಮುಖ್ಯ ವನ್ಯಜೀವಿ ಪರಿಪಾಲಕರು
ಕರ್ನಾಟಕ, ಬೆಂಗಳೂರು.

## ಅನುಬಂಧ-06

### 2022-23 ನೇ ಸಾಲಿನಲ್ಲಿ ಆನೆ, ಚಿರತೆ, ಮಂಗ, ನವಿಲು ಹಾಗೂ ಇತರೆ ವನ್ಯಪ್ರಾಣಿಗಳಿಂದ ಹಾನಿಗೊಳಗಾದ ಪ್ರಕರಣಗಳಿಗೆ ಪರಿಹಾರ ಪಾವತಿಸಿರುವ ವಿವರಗಳು

| ಕ್ರ ಸಂ | ವಿಭಾಗ | ಬೆಳೆ ಪರಿಹಾರ | ಗಾಯ | ಆಸ್ತಿ ನಷ್ಟ |
|---|---|---|---|---|
| | | ಸಂಖ್ಯೆ | ಸಂಖ್ಯೆ | ಸಂಖ್ಯೆ |
| **ಬೆಂಗಳೂರು ವೃತ್ತ** | | | | |
| 1 | ಬೆಂಗಳೂರು ನಗರ | 61 | - | 4 |
| 2 | ಬೆಂಗಳೂರು ಗ್ರಾಮಾಂತರ | - | 1 | - |
| 3 | ರಾಮನಗರ | 4,814 | 17 | 357 |
| 4 | ಕೋಲಾರ | 284 | 1 | 6 |
| 5 | ಚಿಕ್ಕಬಳ್ಳಾಪುರ | 57 | - | - |
| 6 | ಬನ್ನೇರುಘಟ್ಟ | 1,388 | 3 | 122 |
| | **ಒಟ್ಟು** | **6,604** | **22** | **489** |
| **ಬೆಳಗಾಂ ವೃತ್ತ** | | | | |
| 1 | ಬೆಳಗಾಂ | 31 | 3 | - |
| 2 | ಗೋಕಾಕ್ | 36 | 1 | - |
| 3 | ಬಾಗಲಕೋಟೆ | 119 | - | - |
| 4 | ವಿಜಯಪುರ | 12 | - | - |
| | **ಒಟ್ಟು** | **198** | **4** | **-** |
| **ಬಳ್ಳಾರಿ ವೃತ್ತ** | | | | |
| 1 | ಬಳ್ಳಾರಿ | 76 | 3 | - |
| 2 | ವಿಜಯನಗರ | 222 | 5 | - |
| 3 | ಚಿತ್ರದುರ್ಗ | 101 | 1 | - |
| 4 | ದಾವಣಗೆರೆ | 110 | 8 | - |
| 5 | ಕೊಪ್ಪಳ | 167 | 5 | - |
| | **ಒಟ್ಟು** | **676** | **22** | **-** |
| **ಚಾಮರಾಜನಗರ ವೃತ್ತ** | | | | |
| 1 | ಬಿ.ಆರ್.ಟಿ | 586 | 3 | 42 |
| 2 | ಎಂ.ಎಂ ಹಿಲ್ಸ್ | 534 | - | 84 |
| 3 | ಕಾವೇರಿ ವ.ಜೀ | 1,491 | - | 131 |
| | **ಒಟ್ಟು** | **2,611** | **3** | **257** |
| **ಚಿಕ್ಕಮಗಳೂರು ವೃತ್ತ** | | | | |
| 1 | ಚಿಕ್ಕಮಗಳೂರು | 1,798 | 13 | 41 |
| 2 | ಕೊಪ್ಪ | 400 | 4 | 4 |
| 3 | ಭದ್ರಾ | 287 | 1 | 4 |
| | **ಒಟ್ಟು** | **2,485** | **18** | **49** |
| **ಧಾರವಾಡ ವೃತ್ತ** | | | | |
| 1 | ಧಾರವಾಡ | 726 | - | 10 |
| 2 | ಗಧಗ್ | 257 | 4 | - |
| 3 | ಹಾವೇರಿ | 578 | 5 | - |
| | **ಒಟ್ಟು** | **1,561** | **9** | **10** |
| **FDPT ಮೈಸೂರು** | | | | |
| 1 | ಬಂಡೀಪುರ | 2,689 | 18 | 218 |
| | **ಒಟ್ಟು** | **2,689** | **18** | **218** |

| | | | | |
|---|---|---|---|---|
| ಗುಲ್ಬರ್ಗ ವೃತ್ತ | | | | |
| 1 | ಬೀದರ್ | 621 | 14 | |
| 2 | ಗುಲ್ಬರ್ಗ | 150 | 13 | |
| 3 | ಯಾದಗಿರಿ | - | 10 | |
| 4 | ರಾಯಚೂರು | 9 | 1 | - |
| | **ಒಟ್ಟು** | **780** | **38** | **-** |
| ಕೆನರಾ ವೃತ್ತ | | | | |
| 1 | ದಾಂಡೇಲಿ | 279 | 4 | |
| 2 | ಹಳಿಯಾಳ | 207 | 4 | - |
| 3 | ಹೊನ್ನಾವರ | 80 | 8 | - |
| 4 | ಕಾರವಾರ | 36 | 2 | - |
| 5 | ಶಿರಸಿ | 364 | 2 | - |
| 6 | ಯಲ್ಲಾಪುರ | 300 | 3 | 1 |
| | **ಒಟ್ಟು** | **1,266** | **23** | **1** |
| ಹಾಸನ ವೃತ್ತ | | | | |
| 1 | ಹಾಸನ | 4,285 | 8 | 139 |
| 2 | ತುಮಕೂರು | 285 | 20 | - |
| | **ಒಟ್ಟು** | **4,570** | **28** | **139** |
| ಕೊಡಗು ವೃತ್ತ | | | | |
| 1 | ನಾಗರಹೊಳೆ | 1,607 | 8 | 115 |
| 2 | ಮಡಿಕೇರಿ | 1,976 | 4 | 38 |
| 3 | ವಿರಾಜಪೇಟೆ | 1,990 | 4 | 51 |
| 4 | ಮಡಿಕೇರಿ ವ.ಜೀ | 1,612 | 2 | 82 |
| | **ಒಟ್ಟು** | **7,185** | **18** | **286** |
| ಮಂಗಳೂರು ವೃತ್ತ | | | | |
| 1 | ಮಂಗಳೂರು | 258 | 5 | - |
| 2 | ಕುಂದಾಪುರ | 239 | - | - |
| 3 | ಕುದುರೇಮುಖ | 116 | 1 | - |
| | **ಒಟ್ಟು** | **613** | **6** | **-** |
| ಮೈಸೂರು ವೃತ್ತ | | | | |
| 1 | ಮೈಸೂರು | 844 | 8 | 50 |
| 2 | ಹುಣಸೂರು | 92 | 3 | 1 |
| 3 | ಮಂಡ್ಯ | 104 | 9 | - |
| 4 | ಮೈಸೂರು ವ.ಜೀ | 14 | 1 | - |
| | **ಒಟ್ಟು** | **1,054** | **21** | **51** |
| ಶಿವಮೊಗ್ಗ ವೃತ್ತ | | | | |
| 1 | ಭದ್ರಾವತಿ | 453 | 8 | 19 |
| 2 | ಸಾಗರ | 128 | - | |
| 3 | ಶಿವಮೊಗ್ಗ | 287 | 1 | - |
| 4 | ಶಿವಮೊಗ್ಗ ವ.ಜೀ | 74 | - | |
| | **ಒಟ್ಟು** | **942** | **9** | **19** |
| | **ಒಟ್ಟಾರೆ** | **33,234** | **239** | **1,519** |

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ(ವನ್ಯಜೀವಿ)
ಮತ್ತು ಮುಖ್ಯ ವನ್ಯಜೀವಿ ಪರಿಪಾಲಕರು
ಕರ್ನಾಟಕ, ಬೆಂಗಳೂರು.

ಅನುಬಂಧ-07

**ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ಸಂಭವಿಸಿದ ಮಾನವ ವನ್ಯಜೀವಿ ಸಂಘರ್ಷ ಪ್ರಕರಣಗಳ ವಿವರ ಈ ಕೆಳಗಿನಂತಿದೆ.**

| ಕ್ರ.ಸಂ | ವರ್ಷ | ಮಾನವ ಸಾವು ಪ್ರಕರಣಗಳ ಸಂಖ್ಯೆ | | | ಮಾನವ ಗಾಯಪ್ರಕರಣಗಳ ಸಂಖ್ಯೆ | | |
|---|---|---|---|---|---|---|---|
| | | ದಕ್ಷಿಣ ಕನ್ನಡ | ಉಡುಪಿ | ಒಟ್ಟು | ದಕ್ಷಿಣ ಕನ್ನಡ | ಉಡುಪಿ | ಒಟ್ಟು |
| 1 | 2023-24 | 1 | 1 | **2** | 11 | 5 | **16** |
| 2 | 2024-25 | - | - | | 9 | 7 | **16** |
| 3 | 2025-26 | 2 | 1 | **3** | 7 | 10 | **17** |
| **ಒಟ್ಟು** | | **3** | **2** | **5** | **27** | **22** | **49** |

**ಕಳೆದ 03 ವರ್ಷಗಳಲ್ಲಿ ಕಾರ್ಯಾಚರಣೆ ಮೂಲಕ** ಜನವಸತಿ ಪ್ರದೇಶಗಳಿಂದ **ವನ್ಯಪ್ರಾಣಿಯನ್ನು ಸೆರೆಹಿಡಿದು ರಕ್ಷಣೆ ಮಾಡಿರುವ ವಿವರಗಳು** ಕೆಳಗಿನಂತಿದೆ.

| ಕ್ರ. ಸಂ. | ಜಿಲ್ಲೆ | ವರ್ಷ | ಪ್ರಕರಣಗಳ ಸಂಖ್ಯೆ | ವನ್ಯಪ್ರಾಣಿ ಹೆಸರು |
|---|---|---|---|---|
| 1 | ಉಡುಪಿ | 2023-24 | 3 | ಚಿರತೆ |
| | ದಕ್ಷಿಣ ಕನ್ನಡ | | 7 | ಚಿರತೆ |
| | **ಒಟ್ಟು** | | **10** | |
| 2 | ಉಡುಪಿ | 2024-25 | 12 | 11 ಚಿರತೆ,: 01 ಜಿಂಕೆ |
| | ದಕ್ಷಿಣ ಕನ್ನಡ | | 9 | ಚಿರತೆ |
| | **ಒಟ್ಟು** | | **21** | |
| 3 | ಉಡುಪಿ | 2025-26 | 10 | ಚಿರತೆ |
| | ದಕ್ಷಿಣ ಕನ್ನಡ | | 6 | ಚಿರತೆ |
| | **ಒಟ್ಟು** | | **16** | |

9/3/26

**ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ(ವನ್ಯಜೀವಿ)**
**ಮತ್ತು ಮುಖ್ಯ ವನ್ಯಜೀವಿ ಪರಿಪಾಲಕರು**
**ಕರ್ನಾಟಕ, ಬೆಂಗಳೂರು.**